type of condition and extend inoculation facilities at all the District hospitals where a team of able and experienced doctors will always be available, which can easily perform the work of all sorts of inoculations of Hajis at the District headquarters only and the Hajis also may be allowed to get the inoculations at their respective district hospitals.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮೊನ್ನೆದಿವಸ ಮಾನ ಇದಿನಬ್ಬನವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಕರ್ನಾಟಕ ರಾಜ್ಯದಿಂದ ಪ್ರತಿ ವರ್ಷವೂ ಹಾಜ್ ಯಾತ್ರೆಗೆ ಹೋಗುವವರು ಕಾಲರಾ ಚುಚ್ಚುಮದ್ದು ಪಡೆದು ಪಾತ್ರ ತೆಗೆದುಕೊಂಡು ಇಂಟರ್‌ನ್ಯಾಷನಲ್ ವ್ಯಾಕ್ಸಿನೇಟ್ ಸರ್ಟಿಫಿಕೇಟ್ ಪಡೆದುಕೊಳ್ಳಬೇಕಾಗಿತ್ತು. ಆದರೆ ಈ ವರ್ಷ ಈ ಯಾತ್ರೆಗೆ ಹೋಗುವವರು ಕಾಲರಾ ಚುಚ್ಚುಮದ್ದು ಪಾತ್ರ ಅಲ್ಲದೆ ಮೆನಿನ್‌ಜಿಟೀಸ್ ಚುಚ್ಚುಮದ್ದು ಕೂಡ ಹಾಕಿಸಿಕೊಳ್ಳಬೇಕೆಂದು ಸೌದಿ ಅರೇಬಿಯಾ ಸರ್ಕಾರ ಆದೇಶ ನೀಡಿದೆ ಎಂದು ಭಾರತ ಸರ್ಕಾರವು ತಿಳಿಸಿರುತ್ತದೆ. ಆದರ ಪ್ರಕಾರ ಮೆನಿನ್‌ಜಿಟೀಸ್ ಚುಚ್ಚುಮದ್ದು ಹಾಕಿಕೊಳ್ಳದೆ ಹೋಗುವ ಪ್ರವಾಸಿಗರನ್ನು ಸೌದಿ ಅರೇಬಿಯಾ ದೇಶಕ್ಕೆ ಹೋಗಲು ನಿಷೇದಿಸಿರುತ್ತದೆ. ಆದಕಾರಣ ಈ ಮೆನಿನ್‌ಜಿಟೀಸ್ ಚುಚ್ಚುಮದ್ದನ್ನು ತುರ್ತಾಗಿ ೨೫೦೦ ಡೋಸ್ ಗಳಷ್ಟು ಪ್ರಮಾಣದಲ್ಲಿ ನವದೆಹಲಿಯಿಂದ ಒಂದೂವರೆ ತಿಂಗಳ ಹಿಂದೆ ತರಿಸಿ ಹಾಜ್ ಯಾತ್ರಿಕರಿಗೆ ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಚುಚ್ಚುಮದ್ದು ಕೊಡಲು ವ್ಯವಸ್ಥೆ ಮಾಡಲಾಗಿದೆ.

ಹಾಜ್ ಯಾತ್ರಿಕರು ಈ ಚುಚ್ಚುಮದ್ದನ್ನು ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಹಾಕಿಸಿಕೊಂಡು ಸರ್ಟಿಫಿಕೇಟ್ ಪಡೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಹಾಜ್ ಸಮಿತಿಯವರು ಎಲ್ಲಾ ಹಾಜ್ ಯಾತ್ರಿಕರಿಗೆ ಪತ್ರಿಕಾ ಪ್ರಕಟಣೆಗಳ ಮೂಲಕ ಹಾಗೂ ಲಿಖಿತ ಮೂಲಕ ತಿಳಿಸಲಾಗಿದೆ. ಈ ಚುಚ್ಚುಮದ್ದನ್ನು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಕೊಡಲು ವ್ಯವಸ್ಥೆ ಮಾಡಬೇಕೆಂದು ಬೇಡಿಕೆಗಳು ಬಂದಿರುತ್ತವೆ. ಆದರೆ ಈ ಕೆಳಗೆ ನಮೂದಿಸಿರುವ ಕಾರಣಗಳಿಂದ ಆ ವ್ಯವಸ್ಥೆಯನ್ನು ಮಾಡಲಾಂ ತೊಂದರೆಯಾಯಿತು.

೧) ಈ ಮೆನಿನ್‌ಜಿಟೀಸ್ ಚುಚ್ಚುಮದ್ದು ಈ ರಾಜ್ಯಕ್ಕೆ ಸ್ವಲ್ಪ ಪ್ರಮಾಣದಲ್ಲಿ (೨೫೦೦ಡೋಸ್) ಮಾತ್ರ ಲಭಿಸಿರುತ್ತದೆ.

೨) ಈ ಚುಚ್ಚುಮದ್ದು ೫೦ ಎಂ.ಎಲ್. ಸೀಸೆಗಳಲ್ಲಿ ಶೇಖರಿಸಿದ್ದು, ಒಂದು ಸಲ ಈ ಸೀಸಿಯನ್ನು ತೆರೆದ ಕೂಡಲೆ ೮.೦೦ ಘಂಟೆ ಅವಧಿಯೊಳಗೆ ಉಪಯೋಗಿಸಬೇಕಾಗುತ್ತದೆ. ಮತ್ತು ೫೦ ಜನ ಯಾತ್ರಿಕರು ಸೇರಿದ್ದಲ್ಲಿ ಮಾತ್ರ ಈ ಸೀಸೆಯನ್ನು ತೆರೆಯಬೇಕಾಗುತ್ತದೆ. ಇಲ್ಲದಿದ್ದಲ್ಲಿ, ಈ ಅತೀಮೌಲ್ಯದ ಚುಚ್ಚುಮದ್ದು ವ್ಯರ್ಥವಾಗುವ ಸಂಭವವಿದೆ,

೩) ಈ ರಾಜ್ಯದಲ್ಲಿ ಇದನ್ನು ಪ್ರಥಮ ಬಾರಿ ಉಪಯೋಗಿಸುವುದರಿಂದ, ಅದರಿಂದ ಉಂಟಾಗುವ ತೊಡಕುಗಳು ಮತ್ತು ಅನರ್ಥಗಳನ್ನು ಎದುರಿಸಲಿಕ್ಕೆ ಮಾಡಬೇಕಾದ ವ್ಯವಸ್ಥೆಯನ್ನು ಜಿಲ್ಲಾ ಕೇಂದ್ರಗಳಲ್ಲಿ ತಕ್ಷಣ ಮಾಡಲು ಸಾಧ್ಯವಾಗಲಾರದು. ಈ ಕಾರಣಗಳಿಂದ ಈ ಚುಚ್ಚುಮದ್ದು ಅನ್ನು ಬೆಂಗಳೂರಿನಲ್ಲಿರುವ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಪರಿಸ್ಥಿತಿಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರ ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆಯನ್ನು ಮಾಡಲು ಕಷ್ಟವಾಗುತ್ತದೆ.

ಅರಕ್ಷರ ಠಾಣೆಯಲ್ಲಿ ಕಸ ಗುಡಿಸುವವರ ಸಂಬಳವನ್ನು ಏರಿಸುವ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ.—ಜೀತ ವಿಮುಕ್ತಿಗಾಗಿ ಪರಿಶ್ರಮಿಸಬೇಕಾದ ಸರಕಾರ ಸರ್ಕಾರಿ ಕಛೇರಿಗಳಲ್ಲಿಯೇ ಜೀತ ಪದ್ಧತಿಯನ್ನು ಮುಂದುವರಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ, ಉದಾಹರಣೆಗೆ ಅರಕ್ಷಕರ ಠಾಣೆಗಳಲ್ಲಿ ಕಸಗುಡಿಸುವವರ ಸಂಬಳ ದಿನಕ್ಕೆ ಒಂದೇ ರೂಪಾಯಿ ತಿಂಗಳಿಗೆ ೩೦ ರೂಪಾಯಿ ಮಾತ್ರ. ವೇತನ ಹೆಚ್ಚಿಸಲು ಹಲವಾರು ವರ್ಷಗಳಿಂದ ಬೇಡಿಕೆ ಇದೆ. ಎಲ್ಲವೂ

ವಿರುತ್ತಿದೆ, ಇವರ ಸಂಬಳ ಮಾತ್ರ ಇದ್ದಂತೆಯೇ ಇದೆ. ಕೆಲಸ ಬಿಡಲು ಮಾತ್ರ ಸಾಧ್ಯವಿಲ್ಲ. ಕಾರಣ ಆರಕ್ಷರ ಆಗ್ರಹಕ್ಕೆ ತುತ್ತಾಗುವ ಭಯ. ಹೀಗಾಗಿ ದಿನಕ್ಕೊಂದು ರೂಪಾಯಿಯಾಸೆ, ಭಿಕ್ಷೆ ಪಡೆದು ದಂಡಿಯುತ್ತಲೇ ಹೋಗುತ್ತಿದ್ದಾರೆ. ದಿನ ಉರುಳುತ್ತಿವೆ ವರ್ಷ ಉರುಳುತ್ತಿವೆ, ಕಾಲ ಬದಲಾಗುತ್ತಿದೆ. ಈ ಅವಸ್ಥೆಯಂ ಕಂರಿತು ಯಾವ ಬದಲಾವಣೆಯೂ ಆಗುತ್ತಿಲ್ಲ, ಯಾವ ವ್ಯವಸ್ಥೆಯೂ ಕಾಳಜಿ ತೋರಿಸುತ್ತಿಲ್ಲ. ಪೋಲೀಸ್ ಸ್ಟೇಶನ್ನಿನ ಎಲ್ಲಾ ಕೊಳೆ ತೆಗೆಯಲು ಸರಕಾರದಿಂದ ಆಗದಿದ್ದರೆ, ಕಸ ಗುಡಿಸಿ ಸ್ವಚ್ಛ ಮಾಡುವವರ ಸಂಬಳದಲ್ಲಾದರೂ ಏರಿಕೆಮಾಡಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ

ಶ್ರೀ ವೀರಣ್ಣ (ಸಣ್ಣ ಉಳಿತಾಯ, ಬಂದೀಖಾನೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಪೋಲೀಸ್ ಇಲಾಖೆಯಲ್ಲಿ 'ಡಿ' ದರ್ಜೆಯ ೨೨೬ ಜನ ಕಸ ಗುಡಿಸುವವರು ಇದ್ದು, ಅವರ ಶ್ರೇಣಿ ೭೮೦ ರಿಂದ ೧೦೪೦ರವರೆಗೆ ಇದೆ. ಇವರನ್ನು ದೊಡ್ಡ ಕಛೇರಿಗಳಲ್ಲಿ ಮತ್ತು ಸಿಬ್ಬಂದಿ ಜಾಸ್ತಿಯಿರುವ ಉಪ ಕಛೇರಿಗಳಲ್ಲಿ ನೇಮಿಸಲಾಗಿದೆ. ಸಿಬ್ಬಂದಿ ಕಡಿಮೆ ಇರುವ ಪೋಲೀಸ್ ಠಾಣೆಗಳಲ್ಲಿ ಹಾಗೂ ಹೊರವಲಯ ಠಾಣೆಗಳಲ್ಲಿ ಸಿಗಧಿತ ಒಂದು ಅಥವಾ ಎರಡು ಗಂಟೆ ಮಾತ್ರ ಕೆಲಸ ಇರುವುದರಿಂದ ಸಾದಿಲ್ವಾರು ನಿಧಿಯಿಂದ ೧೨೦ ರೂಪಾಯಿಗಳವರೆಗೂ ಮಾಸಿಕ ವೇತನದ ಮೇಲೆ ಖಾಸಗಿ ಜನರನ್ನು ನೇಮಿಸಿಕೊಳ್ಳಲಾಗಿದೆ.

ಪ್ರಸ್ತುತ ಬೆಂಗಳೂರಿನಲ್ಲಿ ಕಡಿಮೆ ವೇತನ ಪಡೆಯುತ್ತಿರುವ ಕಸಗುಡಿಸುವವರ ವೇತನವನ್ನು ಹೆಚ್ಚು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶಾಸನ ರಚನಾ ಕಲಾಪಗಳು

೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ರೇಷ್ಮೆ ಮಂತ್ರಿಗಳು).

"೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೊರುತ್ತೇನೆ.

ಅಧ್ಯಕ್ಷರು.—
ಪ್ರಸ್ತಾವ ಏನೆಂದರೆ.

"೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡಬೇಕೆಂದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—

"೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಯಿತು. *